Akashvani : Bangalore
National Bulletin In Kannada
08.10.2024 / 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ವಿಧಾನಸಭಾ ಚುನಾವಣೆ: ಜಮ್ಮು-ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಮೈತ್ರಿಕೂಟ ಸರ್ಕಾರ ರಚನೆಗೆ ಸಿದ್ಧತೆ; ಹರಿಯಾಣದಲ್ಲಿ ಬಿಜೆಪಿಗೆ ಜನಾದೇಶ

- ಇಂದು ವಾಯುಪಡೆ ದಿನ; ಸವಾಲುಗಳನ್ನು ಎದುರಿಸಲು ವಾಯುಪಡೆ ಇನ್ನಷ್ಟು ಸನ್ನದ್ಧ

- ರಾಷ್ಟ್ರಪತಿಗಳಿಂದ ೭೦ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ; ಮಿಥುನ್ ಚಕ್ರವರ್ತಿ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಗೌರವ

- ಕನ್ನಡದ ಕೆಜಿಎಫ್-೨, ಕಾಂತಾರ, ಮಧ್ಯಂತರ, ರಂಗವಿಭೋಗ ಚಿತ್ರಗಳಿಗೆ ವಿವಿಧ ಪ್ರಶಸ್ತಿ

- ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್; ಆಸ್ಟ್ರೇಲಿಯಾ- ನ್ಯೂಜಿಲೆಂಡ್ ನಡುವಿನ ಪಂದ್ಯ ಪ್ರಗತಿಯಲ್ಲಿ

<><*<><>*><>

ಜಮ್ಮು-ಕಾಶ್ಮೀರ ಹಾಗೂ ಹರಿಯಾಣ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯ ಬಹುತೇಕ ಬಹುತೇಕ ಪೂರ್ಣಗೊಂಡಿದೆ. ಹರಿಯಾಣಾದ ಒಂದು ಕ್ಷೇತ್ರ ಹೊರತುಪಡಿಸಿ ಎಲ್ಲಾ ಕ್ಷೇತ್ರಗಳ ಮತ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಪೂರ್ಣಗೊಂಡಿದೆ. ಜಮ್ಮು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಮೈತ್ರಿಕೂಟ ಸರ್ಕಾರ ರಚನೆಗೆ ಸಿದ್ಧವಾಗಿದೆ. ಸಿದ್ಧವಾಗಿದೆ. ಹರಿಯಾಣಾದಲ್ಲಿ ಬಿಜೆಪಿ ೪೮ ಕ್ಷೇತ್ರಗಳಲ್ಲಿ ಜಯ ಸಾಧಿಸಿ ಬಹುಮತ ಪಡೆದಿದೆ. ೯೦ ಬಹುಮತ ಪಡೆದಿದೆ. ೯೦ ಸದಸ್ಯ ಬಲದ ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ೪೨ ಸ್ಥಾನಗಳಲ್ಲಿ ಗೆಲುವು ಸಾಧಿಸಿದರೆ, ಕಾಂಗ್ರೆಸ್ ಪಕ್ಷ ೬ ಸ್ಥಾನಗಳಲ್ಲಿ ಪಕ್ಷ ೬ ಸ್ಥಾನಗಳಲ್ಲಿ  ಜಯಶಾಲಿಯಾಗಿದೆ. ಬಿಜೆಪಿ ೨೯ , ಪೀಪಲ್ಸ್ ಡೆಮಾಕ್ರೆಟಿಕ್ ಪಕ್ಷ ೩ ಡೆಮಾಕ್ರೆಟಿಕ್ ಪಕ್ಷ ೩ ಸ್ಥಾನಗಳಲ್ಲಿ ಗೆದ್ದಿವೆ. ಕಮ್ಯುನಿಸ್ಟ್ ಪಕ್ಷ, ಆಮ್ ಆದ್ಮಿ ಪಕ್ಷ ಮತ್ತು ಪೀಪಲ್ ಆದ್ಮಿ ಪಕ್ಷ ಮತ್ತು ಪೀಪಲ್ ಕಾನ್ಫರೆನ್ಸ್ ಪಕ್ಷ ತಲಾ ೧ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದು, ಪಕ್ಷೇತರರು ಸಾಧಿಸಿದ್ದು, ಪಕ್ಷೇತರರು ೭ ಕ್ಷೇತ್ರಗಳಲ್ಲಿ ಗೆದ್ದಿದ್ದಾರೆ. ಬದ್ಗಾಮ್ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ಒಮರ್ ಅಬ್ದುಲ್ಲಾ ಜಯಸಾಧಿಸಿದ್ದಾರೆ. ಹರಿಯಾಣದಲ್ಲಿ ಬಿಜೆಪಿ ೪೮ ಸ್ಥಾನಗಳಲ್ಲಿ ಗೆಲುವು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಕಾಂಗ್ರೆಸ್ ೩೬, ಭಾರತೀಯ ರಾಷ್ಟ್ರೀಯ ಲೋಕದಳ ೨ ಕ್ಷೇತ್ರಗಳಲ್ಲಿ, ಲೋಕದಳ ೨ ಕ್ಷೇತ್ರಗಳಲ್ಲಿ, ಪಕ್ಷೇತರರಿಗೆ ೩ ಕ್ಷೇತ್ರಗಳಲ್ಲಿ ಗೆಲುವು ಲಭಿಸಿದೆ. ಹರಿಯಾಣದಲ್ಲಿ ಲಭಿಸಿದೆ. ಹರಿಯಾಣದಲ್ಲಿ ರೋಹ್ಟಕ್ ಕ್ಷೇತ್ರದ ಮತ ಎಣಿಕೆ ಕಾರ್ಯ ಪ್ರಗತಿಯಲ್ಲಿದ್ದು ಅಲ್ಲಿ ಪ್ರಗತಿಯಲ್ಲಿದ್ದು ಅಲ್ಲಿ ಕಾಂಗ್ರೆಸ್ ಪಕ್ಷ ಮುನ್ನಡೆಯಲ್ಲಿದೆ.  ಕಾಂಗ್ರೆಸ್‌ನಿಂದ ಕುಸ್ತಿಪಟು ವಿನೇಶ್

ಕಾಂಗ್ರೆಸ್‌ನಿಂದ ಕುಸ್ತಿಪಟು ವಿನೇಶ್ ಫೋಗಟ್ ಜುಲಾನಾ ಕ್ಷೇತ್ರದಿಂದ ಗೆಲುವು ಸಾಧಿಸಿದ್ದಾರೆ.

ಸಾಧಿಸಿದ್ದಾರೆ.

<><*<><>*><>

ಇಂದು ವಾಯುಪಡೆ ದಿನ. ಇದರ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಭಾರತೀಯ ವಾಯುಪಡೆಯ ವೀರಯೋಧರಿಗೆ ಶುಭಾಶಯ ತಿಳಿಸಿದ್ದಾರೆ. ವಾಯುಪಡೆಯ ಯೋಧರ ಧೈರ್ಯ ಮತ್ತು ವೃತ್ತಿಪರತೆಯು ಮೆಚ್ಚುಗೆ ಪಡೆದಿದ್ದು, ರಾಷ್ಟ್ರವನ್ನು ರಕ್ಷಿಸುವಲ್ಲಿ ಅವರ ಪಾತ್ರ ಅತ್ಯಂತ ಶ್ಲಾಘನೀಯ ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಸಂದೇಶದಲ್ಲಿ ಹೇಳಿದ್ದಾರೆ. ಭಾರತೀಯ ವಾಯುಪಡೆಯು ೨೧ನೇ ಶತಮಾನದಲ್ಲಿ ಹೇಗೆ ಶಕ್ತಿಶಾಲಿಯಾಗಿದೆ ಎಂಬ ಬಗ್ಗೆ ಅವರು ತಿಳಿಸಿದ್ದಾರೆ.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

<><*<><>*><>

ಚೆನ್ನೈ ಬಳಿ ಇರುವ ತಾಂಬರಮ್ ವಾಯುಪಡೆ ಕೇಂದ್ರದಲ್ಲಿ ಇದೇ ಮೊದಲ ಬಾರಿಗೆ ಇಂದು ೯೨ನೇ ರೈಸಿಂಗ್ ಡೇ ಆಚರಿಸಲಾಯಿತು. ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಧ್ವಜಾರೋಹಣ ನೆರವೇರಿಸಿದರು. ವಾಯುಪಡೆ ಸಿಬ್ಬಂದಿ ಮುಖ್ಯಸ್ಥ ಎ.ಪಿ.ಸಿಂಗ್, ಪರೇಡ್ ವೀಕ್ಷಿಸಿ, ಈ ವರ್ಷ ವಾಯುಪಡೆಯಲ್ಲಿ ಅತ್ಯುತ್ತಮ ಪ್ರದರ್ಶನ ತೋರಿದವರಿಗೆ ಪ್ರಶಸ್ತಿ ವಿತರಿಸಿದರು. ಬಳಿಕ ಅವರು, ಜಾಗತಿಕ ಭದ್ರತೆ ಮತ್ತು ಪ್ರಸ್ತುತ ನಡೆಯುತ್ತಿರುವ ಸಂಘರ್ಷಗಳಿಂದಾಗಿ ಸದೃಢ ಮತ್ತು ಸಮರ್ಥ ವಾಯುಪಡೆ ಅಗತ್ಯವಿದೆ. ದೇಶದ ಹಿತಾಸಕ್ತಿಗಾಗಿ ಯಾವುದೇ ಸವಾಲನ್ನು ಎದುರಿಸಲು ವಾಯುಪಡೆ ಸನ್ನದ್ಧವಾಗಿರಬೇಕು. ನಾವಿನ್ಯತೆಯೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

<><*<><>*><>

ಭಾರತೀಯ ವಾಯುಪಡೆ ದಿನದ ಅಂಗವಾಗಿ ಇಂದು ಲಡಾಖ್‌ನ ಥಾಯಿಸ್‌ನಿಂದ ೭ ಸಾವಿರ ಕಿಲೋಮೀಟರ್ ಉದ್ದದ ’ವಾಯು ವೀರ್ ವಿಜೇತ’ ಕಾರ್ ರ್‍ಯಾಲಿಗೆ ಕೇಂದ್ರ ಹೆದ್ದಾರಿ ಖಾತೆ ರಾಜ್ಯ ಸಚಿವ ಹರ್ಷ ಮಲ್ಹೋತ್ರಾ ಚಾಲನೆ ನೀಡಿದರು. ಭಾರತೀಯ ವಾಯುಪಡೆಯ ಯೋಧರು ಮತ್ತು ಉತ್ತರಾಖಂಡ ಯುದ್ಧ ಸ್ಮಾರಕದ ಪ್ರಮುಖರ ಕುರಿತು ಈ ರ್‍ಯಾಲಿ ತಿಳಿಸುತ್ತದೆ. ಈ ಕಾರ್ ರ್‍ಯಾಲಿಯು, ಕಾರ್ಗಿಲ್, ಶ್ರೀನಗರ, ಜಮ್ಮು, ಡೆಹರಾಡೂನ್ ಮಾರ್ಗವಾಗಿ ಸಂಚರಿಸಿ ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಇದೇ ತಿಂಗಳ ೨೯ ರಂದು ಸಂಪನ್ನಗೊಳ್ಳಲಿದೆ. ಭಾರತೀಯ ವಾಯುಪಡೆಯ ವೈಭಯುತ ಇತಿಹಾಸ, ವಿವಿಧ ಯುದ್ಧಗಳಿಲ್ಲಿನ ಯೋಧರ ಪರಾಕ್ರಮ ಮತ್ತು ರಕ್ಷಣಾ ಕಾರ್ಯಾಚರಣೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಯುವ ಜನತೆಯನ್ನು ದೇಶಸೇವೆಯತ್ತ ಆಕರ್ಷಿಸುವುದು ಈ ರ್‍ಯಾಲಿಯ ಉದ್ದೇಶವಾಗಿದೆ.

<><*<><>*><>

’ಅಟಲ್ ಪಿಂಚಣಿ ಯೋಜನೆ’ಯಡಿ ೭ ಕೋಟಿಗೂ ಹೆಚ್ಚು ಜನರು ನೋಂದಾಯಿಸಿಕೊಂಡಿದ್ದು, ಈ ವರ್ಷ ೫೬ ಲಕ್ಷ ಜನರು ಈ ಯೋಜನೆಗೆ ಸೇರ್ಪಡೆಯಾಗಿದ್ದಾರೆ ಎಂದು ಪಿಂಚಣಿ ನಿಧಿ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಂಕಿ-ಅಂಶ ಬಿಡುಗಡೆ ಮಾಡಿದೆ. ಜನರು ನೀಡುವ ಮಾಸಿಕ ವಂತಿಕೆ ಆಧರಿಸಿ ನಿವೃತ್ತಿ ನಂತರ ಅವರಿಗೆ ತಿಂಗಳಿಗೆ ಕನಿಷ್ಠ ೧ ಸಾವಿರ ರೂಪಾಯಿಯಿಂದ ೫ ಸಾವಿರ ರೂಪಾಯಿವರೆಗೆ ಪಿಂಚಣಿ ನೀಡುವ ಸಾಮಾಜಿಕ ಭದ್ರತಾ ಯೋಜನೆ ಇದಾಗಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆ ಒದಗಿಸಲು ೨೦೧೫ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು.

<><*<><>*><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮಾಜಿ ಸಚಿವ ದಿವಂಗತ ರಾಮ್ ವಿಲಾಸ್ ಪಾಸ್ವಾನ್ ಅವರ ಪುಣ್ಯ ತಿಥಿಯ ಅಂಗವಾಗಿ ಗೌರವ ನಮನ ಸಲ್ಲಿಸಿದ್ದಾರೆ. ಬಡವರ ಸಬಲೀಕರಣಕ್ಕಾಗಿ ಮತ್ತು ಸದೃಢ ಭಾರತ ನಿರ್ಮಾಣಕ್ಕಾಗಿ ತಮ್ಮ ಜೀವನ ಮುಡಿಪಾಗಿಟ್ಟ ಮಹಾನ್ ನೇತಾರ ಎಂದು ಸಾಮಾಜಿಕ ಜಾಲತಾಣದ ತಮ್ಮ ಪೋಸ್ಟ್‌ನಲ್ಲಿ ಪ್ರಧಾನಿ ಅವರು ಪಾಸ್ವಾನ್ ಅವರನ್ನು ಸ್ಮರಿಸಿದ್ದಾರೆ.

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ನವದೆಹಲಿಯಲ್ಲಿಂದು ೨೦೨೨ನೇ ಸಾಲಿನ ೭೦ನೇ ರಾಷ್ಟ್ರೀಯ ೭೦ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಮಿಥುನ್ ಚಕ್ರವರ್ತಿ ಅವರು ಚಕ್ರವರ್ತಿ ಅವರು ಚಿತ್ರರಂಗಕ್ಕೆ ನೀಡಿದ ಅನನ್ಯ ಕೊಡುಗೆಗಳನ್ನು ಗುರುತಿಸಿ, ಅವರಿಗೆ ಪ್ರತಿಷ್ಠಿತ ದಾದಾ ಅವರಿಗೆ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕನ್ನಡದ ಕಾಂತಾರ ಕನ್ನಡದ ಕಾಂತಾರ ಚಿತ್ರಕ್ಕೆ ಪರಿಪೂರ್ಣ ಮನರಂಜನೆಯ ಅತ್ಯುತ್ತಮ ಚಿತ್ರ ಮತ್ತು ಆ ಚಿತ್ರದಲ್ಲಿನ ಮತ್ತು ಆ ಚಿತ್ರದಲ್ಲಿನ ಅಭಿನಯಕ್ಕಾಗಿ ’ಪ್ರಮುಖ ಪಾತ್ರದಲ್ಲಿ ಅತ್ಯುತ್ತಮ ನಟ’ ಪ್ರಶಸ್ತಿಯನ್ನು ನಟ ನಟ’ ಪ್ರಶಸ್ತಿಯನ್ನು ನಟ ರಿಷಬ್ ಶೆಟ್ಟಿ ಅವರಿಗೆ ಪ್ರದಾನ ಮಾಡಲಾಯಿತು. ಮಧ್ಯಂತರ ಚಿತ್ರದ ಮಧ್ಯಂತರ ಚಿತ್ರದ ಸಂಕಲನಕ್ಕಾಗಿ ಸುರೇಶ್ ಅರಸ್ ಅವರಿಗೆ ಅತ್ಯುತ್ತಮ ಸಂಕಲನ ಪ್ರಶಸ್ತಿ, ಅದೇ ಪ್ರಶಸ್ತಿ, ಅದೇ ಚಿತ್ರದ ನಿರ್ದೇಶನಕ್ಕಾಗಿ ’ನಿರ್ದೇಶಕರ ಅತ್ಯುತ್ತಮ ಚೊಚ್ಚಲ ನಾನ್ ಫೀಚರ್ ಚಿತ್ರ’ ನಾನ್ ಫೀಚರ್ ಚಿತ್ರ’ ಪ್ರಶಸ್ತಿಯನ್ನು ಬಸ್ತಿ ದಿನೇಶ್ ಶೆಣೈ ಅವರಿಗೆ ನೀಡಲಾಯಿತು. ಕೆಜಿಎಫ್-೨ ನೀಡಲಾಯಿತು. ಕೆಜಿಎಫ್-೨ ಚಿತ್ರಕ್ಕೆ ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿ ಲಭಿಸಿದೆ. ರಂಗವಿಭೋಗ ಲಭಿಸಿದೆ. ರಂಗವಿಭೋಗ ಚಿತ್ರಕ್ಕೆ ಅತ್ಯುತ್ತಮ ಕಲೆಯ ಚಿತ್ರ ಪ್ರಶಸ್ತಿ ದೊರೆತಿದೆ. ಉತ್ತಮ ವಿಮರ್ಶಾ ದೊರೆತಿದೆ. ಉತ್ತಮ ವಿಮರ್ಶಾ ಪ್ರಶಸ್ತಿ ವಿಭಾಗದಲ್ಲಿ ದೀಪಕ್ ದುವಾ ಅವರಿಗೆ ಸ್ವರ್ಣಕಮಲ ಪ್ರಶಸ್ತಿ ಸ್ವರ್ಣಕಮಲ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅರಿಜಿತ್ ಸಿಂಗ್ ಅವರಿಗೆ ಅತ್ಯುತ್ತಮ ಹಿನ್ನೆಲೆ ಅತ್ಯುತ್ತಮ ಹಿನ್ನೆಲೆ ಗಾಯಕ ಹಾಗೂ ಬಾಂಬೆ ಜಯಶ್ರೀ ಅವರಿಗೆ ಅತ್ಯುತ್ತಮ ಗಾಯಕಿ ಪ್ರಶಸ್ತಿ ಗಾಯಕಿ ಪ್ರಶಸ್ತಿ ಸಂದಿದೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಅಶ್ವಿನಿ ವೈಷ್ಣವ್ ಮತ್ತು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಮಾತನಾಡಿದ ರಾಷ್ಟ್ರಪತಿ, ಪುರಸ್ಕೃತ ಚಿತ್ರಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಈ ಚಿತ್ರಗಳು ಈ ಚಿತ್ರಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲಿವೆ ಎಂದು ಅಭಿಪ್ರಾಯಪಟ್ಟರು. ಬಳಿಕ ಅಭಿಪ್ರಾಯಪಟ್ಟರು. ಬಳಿಕ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ಚಲನಚಿತ್ರ ರಂಗದ ಅಭಿವೃದ್ಧಿಗೆ ರಂಗದ ಅಭಿವೃದ್ಧಿಗೆ ಪ್ರತಿಭಾ ಪೋಷಣೆ, ಮೂಲಸೌಕರ್ಯ ಮತ್ತು ಸರಳೀಕರಣ ಎಂಬ ಮೂರು ಮೂರು ಆಯಾಮಗಳೊಂದಿಗೆ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದರು. ೨೦೨೨ನೇ ಸಾಲಿಗಾಗಿ ೩೨

ಸಾಲಿಗಾಗಿ ೩೨ ಬೇರೆ ಬೇರೆ ಭಾಷೆಗಳ ಫೀಚರ್ ಫಿಲ್ಮ್ ವಿಭಾಗದಲ್ಲಿ ೩೮೯ ಚಲನಚಿತ್ರಗಳು ಹಾಗೂ ಚಲನಚಿತ್ರಗಳು ಹಾಗೂ ನಾನ್ ಫೀಚರ್ ವಿಭಾಗದಲ್ಲಿ ೧೭ ಭಾಷೆಗಳ ೧೨೮ ಚಿತ್ರಗಳ ಅರ್ಜಿ ಅರ್ಜಿ ಸಲ್ಲಿಕೆಯಾಗಿತ್ತು ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಕಾರ್ಯದರ್ಶಿ ಸಂಜಯ್ ಜಾಜು ತಿಳಿಸಿದ್ದಾರೆ. ವಿವಿಧ ಉಪಕ್ರಮಗಳ ಮೂಲಕ ಭಾರತೀಯ ಚಿತ್ರರಂಗಕ್ಕೆ ಭಾರತೀಯ ಚಿತ್ರರಂಗಕ್ಕೆ ಬೆಂಬಲ ನೀಡಲು ತಮ್ಮ ಸಚಿವಾಲಯ ಬದ್ಧವಾಗಿದೆ ಎಂದು ಅವರು ಅವರು ಹೇಳಿದ್ದಾರೆ.

<><*<><>*><>

ಕರ್ನಾಟಕದ ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ಇಂದು ಬೆಳಗ್ಗೆ ಸಮಷ್ಠಿ ಕವಿಗೋಷ್ಠಿ ನಡೆಯಿತು. ದಸರಾ ಅಂಗವಾಗಿ ನಡೆಯುತ್ತಿರುವ ಕವಿಗೋಷ್ಠಿಯಲ್ಲಿ ನಾಲ್ಕನೇ ದಿನವಾದ ಇಂದು ಇದೇ ಮೊದಲ ಬಾರಿಗೆ ಬಹುಭಾಷೆಯ ಸಮಷ್ಠಿ ಕವಿಗೋಷ್ಠಿ ಆಯೋಜನೆಯಾಗಿತ್ತು. ಇದು ಭಾವೈಕ್ಯತೆಯ ಸಾಮರಸ್ಯ ಕಲ್ಪಿಸುವ ವೇದಿಕೆಯಾಗಿದೆ ಎಂದು ಹಿರಿಯ ಸಾಹಿತಿ ಡಾ.ಎಚ್.ಎಸ್.ಶಿವಪ್ರಕಾಶ್ ಹೇಳಿದ್ದಾರೆ. ಸಂಜೆ ದಸರಾ ಕುರುಚಿತ್ರ ಸ್ಪರ್ಧೆಯ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಇಂದಿನ ನಾಲ್ವಡಿ ಕಾವ್ಯ ಕುಂಚ ಗಾಯನ, ಜಾನಪದ ಗಾಯನ, ಪೊಲೀಸ್ ಬ್ಯಾಂಡ್, ವಾದ್ಯಸಂಗೀತ ಕಾರ್ಯಕ್ರಮಗಳು ಹಾಗೂ ವಿಶೇಷ ಸಂಗೀತ ರಸಸಂಜೆ ಕಾರ್ಯಕ್ರಮ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುತ್ತಿವೆ.

<><*<><>*><>

ಪಶ್ಚಿಮ ಬಂಗಾಳದಲ್ಲಿ ಕೋಲ್ಕತ್ತಾ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಹಿರಿಯ ಸಿಬ್ಬಂದಿ ಸಾಮೂಹಿಕ ರಾಜೀನಾಮೆ ನೀಡಿದ್ದಾರೆ. ಕೋಲ್ಕತ್ತಾದಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಕಿರಿಯ ವೈದ್ಯರಿಗೆ ಬೆಂಬಲವಾಗಿ ಅವರುಗಳು ರಾಜೀನಾಮೆ ಸಲ್ಲಿಸಿದ್ದಾರೆ.

<><*<><>*><>

ಕೃತಕ ನ್ಯೂರಾನ್ ಜಾಲದ ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಅಮೆರಿಕದ ಜಾನ್ ಎಚ್.ಹಾಪ್‌ಫೀಲ್ಡ್ ಮತ್ತು ಕೆನಡಾದ ಜೆಫ್ರಿ ಇ ಹಿಂಟನ್ ಅವರಿಗೆ ೨೦೨೪ನೇ ಸಾಲಿನ ಭೌತವಿಜ್ಞಾನ ನೊಬೆಲ್ ಪುರಸ್ಕಾರವನ್ನು ಘೋಷಿಸಲಾಗಿದೆ. ಈ ಇಬ್ಬರೂ ಆಧುನಿಕ ಕಾಲದ ಮಷಿನ್ ಲರ್ನಿಂಗ್‌ಗೆ ಅಡಿಪಾಯ ಹಾಕಬಲ್ಲ ಭೌತಶಾಸ್ತ್ರದ ಸಾಧನಗಳನ್ನು ಅಭಿವೃದ್ಧಿಪಡಿಸಿದ್ದಾರೆ.

<><*<><>*><>

ನೇಪಾಳದಲ್ಲಿ ನೈಸರ್ಗಿಕ ವಿಕೋಪಗಳಿಂದಾಗಿ ಉಂಟಾಗಿರುವ ಸಂಚಾರ ಸಮಸ್ಯೆಯು ದಸರಾ ಹಬ್ಬದ ಸಂಭ್ರಮವನ್ನು ಕಸಿದಿಲ್ಲ. ಕಠ್ಮಂಡುವಿನ ಸುಮಾರು ಅರ್ಧದಷ್ಟು ಜನರು ತಮ್ಮ ತಮ್ಮ ಊರುಗಳಿಗೆ ತೆರಳುತ್ತಿದ್ದು, ಸ್ಥಳೀಯ ಆಡಳಿತ ಪರ್ಯಾಯ ರಸ್ತೆ ವ್ಯವಸ್ಥೆ ಮಾಡಿದೆ. ಕಠ್ಮಂಡು ಕಣಿವೆಯ ಸಂಚಾರಿ ಪೊಲೀಸ್ ಠಾಣೆ, ಪ್ರಯಾಣಿಕರಿಗೆ ೧೪ ಕಡೆಗಳಲ್ಲಿ ಸಹಾಯ ಕೇಂದ್ರಗಳನ್ನು ತೆರೆದಿದೆ. ಹಿಮಾಲಯ ಪ್ರಾಂತ್ಯದಲ್ಲಿ ಅತ್ಯಂತ ಭಕ್ತಿಭಾವದಿಂದ ಆಚರಿಸಲ್ಪಡುವ ಮತ್ತು ಸಾಂಸ್ಕೃತಿಕ ಮಹತ್ವದ ಈ ಹಬ್ಬವನ್ನು ಕುಟುಂಬ ಸಮೇತರಾಗಿ ಆಚರಿಸುವ ಪ್ರತೀತಿ ಅಲ್ಲಿದೆ.

<><*<><>*><>

ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಾರ್ಜಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಎ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**